# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

**ಕಲಂ 4 (1)(ಬಿ) (iv) ಮಾಹಿತಿ ಹಕ್ಕು ಕಾಯ್ದೆ 2005: ಪ್ರಕಾರ್ಯಗಳನ್ನು ನಿರ್ವಹಿಸಲು ಸಂಸ್ಥೆ ರೂಪಿಸಿರುವ ನಿಬಂಧನೆಗಳು.**

ನಿರ್ದೇಶಕ ಮಂಡಳಿಯು ನೀತಿ ನಿಯಮಗಳನ್ನು ರೂಪಿಸುವ ಅಂಗವಾಗಿದ್ದು ವ್ಯವಸ್ಥಾಪಕ ನಿರ್ದೇಶಕರು ಸಂಸ್ಥೆಯ ಮುಖ್ಯಸ್ಥರಾಗಿ ಹಾಗೂ ನಿರ್ದೇಶಕ ಮಂಡಳಿಯು ರೂಪಿಸುವ ಕಾರ್ಯಗಳನ್ನು ಮತ್ತು ಸರ್ಕಾರವು ಆಗಿಂದಾಗ್ಗೆ ನೀಡುವ ನಿಯಮಗಳನ್ನು ಕಾರ್ಯಗತಗೊಳಿಸುವಲ್ಲಿ ನಿರ್ದೇಶನ ನೀಡುತಲಿದ್ದು ಪ್ರಧಾನ ಕಛೇರಿಯ ಕಾರ್ಯಚಟುವಟಿಕೆಗಳನ್ನು ಸುಗಮವಾಗಿ ಕಾರ್ಯಗತಗೊಳಿಸಲು ಸಂಸ್ಥೆಯ ವಿವಿಧ ಚಟುವಟಿಕೆಗಳನ್ನು ಈ ಕೆಳಕಂಡಂತೆ ವಿಭಜಿಸಲಾಗಿದೆ.

ಸಿಬ್ಬಂದಿ ಮತ್ತು ಆಡಳಿತ ವಿಭಾಗ
ನಿಯಂತ್ರಣ ವಿಭಾಗ
ಸಾಲ ವಸೂಲಾತಿ ಮತ್ತು ಆಸ್ತಿ ಪುನರ್ ನಿರ್ಮಾಣ / ವಸೂಲಾತಿ ವಿಭಾಗ

ಮೇಲಿನ ವಿಭಾಗಗಳ ಒಳಗೊಂಡಂತೆ ಕಾರ್ಯದರ್ಶಿ ವಿಭಾಗ, ಆಂತರಿಕ ಲೆಕ್ಕಪರಿಶೋಧನೆ, ಮಾಹಿತಿ ತಂತ್ರಜ್ಞಾನ, ಆಡಳಿತ ಮಾಹಿತಿ ವ್ಯವಸ್ಥೆ, ವ್ಯವಹಾರ ಅಭಿವೃದ್ಧಿ ಮತ್ತು ಸಾಲ ಸಂಶೋಧನೆ, ಮೂಲ ಸೌಲಭ್ಯ ಅಭಿವೃದ್ಧಿ ವಿಭಾಗಗಳು ಪ್ರಧಾನ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತವೆ. ಸಂಸ್ಥೆಯ ಹಿರಿಯ ಅಧಿಕಾರಿಗಳು ಈ ವಿಭಾಗಗಳ ಮುಖ್ಯಸ್ಥರಾಗಿದ್ದು ಕಾರ್ಯ ನಿರ್ವಾಹಕ ನಿರ್ದೇಶಕರಿಗೆ / ವ್ಯವಸ್ಥಾಪಕ ನಿರ್ದೇಶಕರಿಗೆ ವರದಿಮಾಡಿಕೊಳ್ಳುತ್ತಾರೆ. ಪ್ರತಿ ವಿಭಾಗಕ್ಕೂ ಅವಶ್ಯಕ ಸಿಬ್ಬಂದಿಯನ್ನು ಒದಗಿಸಲಾಗಿದ್ದು, ಸಿಬ್ಬಂದಿಗಳು ವಿಭಾಗದ ಮುಖ್ಯಸ್ಥರಿಗೆ ವರದಿ ಮಾಡಿಕೊಳ್ಳುತ್ತಾರೆ. ವೃತ್ತದ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಆಯಾ ವೃತ್ತದ ಮುಖ್ಯಸ್ಥರಿಗೆ ವರದಿ ಮಾಡಿಕೊಳ್ಳುವ ಪರಿಪಾಠವಿದೆ.